# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ

(ಸಾಂಸಧಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಸೋಮವಾರ ದಿನಾಂಕ:19.08.2024

ಸಂಖ್ಯೆ:43

ವಿಷಯ: ವಿಧಾನ ಪರಿಷತ್ತಿನ ಮಾನ್ಯ ಶಾಸಕರ ವಾಹನಗಳಿಗೆ ಪಾಸುಗಳನ್ನು ವಿತರಿಸುವ ಬಗ್ಗೆ.

*****

ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಿಗೆ ಎರಡು ವಾಹನ ಪಾಸ್‌ಗಳನ್ನು ಈಗಾಗಲೇ ವಿತರಿಸುತ್ತಿದ್ದು, ವಿಧಾನ ಸಭೆಯಲ್ಲಿ ಮಾನ್ಯ ಶಾಸಕರುಗಳಿಗೆ ಮೂರು ಪಾಸ್‌ಗಳನ್ನು ವಿತರಿಸುತ್ತಿರುವುದರಿಂದ ಎರಡು ಸಚಿವಾಲಯದಲ್ಲಿ ಏಕರೂಪತೆಯನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಮಾನ್ಯ ಸಭಾಪತಿಯವರು ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಿಗೆ ತಲಾ ಮೂರು ವಾಹನ ಪಾಸ್‌ಗಳನ್ನು ವಿತರಿಸಲು ಆದೇಶ ನೀಡಿರುತ್ತಾರೆ. ವಾಹನಗಳ ನೋಂದಾವಣಿಯು ಮಾನ್ಯ ಶಾಸಕರುಗಳ ಅಥವಾ ಅವರ ಕುಟುಂಬ ಸದಸ್ಯರ ಹೆಸರಿನಲ್ಲಿರುವುದು ಕಡ್ಡಾಯವಾಗಿರುತ್ತದೆ.

ಮಾನ್ಯ ಶಾಸಕರನ್ನು ಹೊರತುಪಡಿಸಿ ಇತರರು ವಾಹನದ ಪಾಸ್ ಬಳಕೆ ಮಾಡುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ವಿಧಾನ ಪರಿಷತ್ತಿನ ಕಾರ್ಯದರ್ಶಿಯವರ ಸಹಿ ಇಲ್ಲದಿರುವ ಗುರುತಿನ ಚೀಟಿ ಸಂಖ್ಯೆ, ವಾಹನ ಸಂಖ್ಯೆ ಇಲ್ಲದಿರುವುದು ಅಥವಾ ಅಳಿಸಿ ಹೋಗಿರುವ ಅಥವಾ ಹಳೆಯ ವಾಹನ ಪಾಸ್‌ಗಳನ್ನು ಹೊಂದಿದ ವಾಹನಗಳು ಶಾಸಕರ ಭವನ/ವಿಧಾನಸೌಧದ ಒಳಗೆ ಪ್ರವೇಶಿಸುತ್ತಿದ್ದು ಕೆಲವೊಂದು ವಾಹನಗಳಲ್ಲಿ ಕಲರ್ ಜೆರಾಕ್ಸ್ ಪಾಸ್‌ಗಳು ಇರುವುದು ಸಹ ಸಚಿವಾಲಯದ ಗಮನಕ್ಕೆ ಬಂದಿದ್ದು ಅಂತಹ ಪ್ರವೇಶವನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

ಪಾಸ್‌ಗಳ ದುರ್ಬಳಕೆಯನ್ನು ನಿರ್ಭಂದಿಸುವ ದೃಷ್ಟಿಯಿಂದ ಹೆಚ್ಚುವರಿ ವಾಹನ ಪಾಸ್‌ಗಳ ಕೋರಿಕೆಯನ್ನು ಕಡ್ಡಾಯವಾಗಿ ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ ಈ ನಿಟ್ಟಿನಲ್ಲಿ ಮಾನ್ಯ ಶಾಸಕರುಗಳು ಸಹಕರಿಸಬೇಕೆಂದು ಕೋರಿದೆ.

ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳು ಕಾರ್ಯದರ್ಶಿಯವರ ಕಛೇರಿ, ಕೊಠಡಿ ಸಂಖ್ಯೆ: 156-ಸಿ, ಮೊದಲನೇ ಮಹಡಿ, ವಿಧಾನ ಸೌಧ, ಬೆಂಗಳೂರು, ಇಲ್ಲಿ ತಮ್ಮ ಕೋರಿಕೆ ಪತ್ರದೊಂದಿಗೆ ತಮ್ಮ ಹೆಸರಿನಲ್ಲಿರುವ ವಾಹನಕ್ಕೆ ಸಂಬಂಧಪಟ್ಟ ಆರ್.ಸಿ. ಪುಸ್ತಕದ ಪ್ರತಿಯನ್ನು ಸಲ್ಲಿಸಿ ಮೂರನೇ ವಾಹನ ಪಾಸ್‌ಗಳನ್ನು ಪಡೆದುಕೊಳ್ಳಬಹುದಾಗಿದೆ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಕೆ. ಆರ್. ಮಹಾಲಕ್ಷ್ಮಿ<br>
ಕಾರ್ಯದರ್ಶಿ<br>
ಕರ್ನಾಟಕ ವಿಧಾನ ಪರಿಷತ್ತು

ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳ ಮಾಹಿತಿಗಾಗಿ.